ಸೆರೆಹಿಡಿಯುತ್ತಿದ್ದರೋ ಅಂಥ ಶೋಭೆಯನ್ನು ಸೂಸುವ ಮುಖವಲ್ಲ ಅವಳದು. ಅಥವಾ ಅವರ ಬೆಳಕಿನ ವಿನ್ಯಾಸವನ್ನು ಅವಲಂಬಿಸಿದ ಮುಖವೂ ಅಲ್ಲ. ಯಾರೋ ಹೇಳಿದಂತೆ ಅವಳ ಮುಖವೇ ಒಂದು ಫೋಟೋಗ್ರಾಫ್ಡ್ ಥಾಟ್ ಅಥವಾ ಚಿತ್ರೀಕೃತ ಚಿಂತನೆಯಾಗಿತ್ತು

ಗ್ರೇಟಾ ಗಾರ್ಬೊ 1990ರ ಏಪ್ರಿಲ್ 15ರಂದು ನ್ಯೂಯಾರ್ಕಿನಲ್ಲಿ ತೀರಿಕೊಂಡಳು.

***

ಫ್ರೆಂಚ್ ಸಂಜ್ಞಾಶಾಸ್ತ್ರಜ್ಞ (ಸೆಮಿಯಾಲಜಿಸ್ಟ್) ರೋಲಾಂಡ್ ಬಾರ್ತ್‌ನ 'ಮೈಥಾಲಜೀಸ್' ಎಂಬ ಬಹುಮುಖ್ಯ ಪುಸ್ತಕದಲ್ಲಿ 'ದಿ ಫೇಸ್ ಆಫ್ ಗಾರ್ಬೊ' ಎಂಬೊಂದು ಲೇಖನವಿದೆ. ಬಾರ್ತ್ ಮಾತ್ರ ಬರೆಯಬಹುದಾದ ಆ ಲೇಖನದ ಸಾರಾಂಶ ಇದು:

ಕ್ಯಾಮೆರಾದಲ್ಲಿ ಸೆರೆಹಿಡಿಯಲಾದ ಮಾನವ ಮುಖ ಪ್ರೇಕ್ಷಕರನ್ನು ಅಪರಿಮಿತ ಆನಂದದಲ್ಲಿ ಮುಳುಗಿಸುತ್ತಿದ್ದ, ಮುಖವೇ ಮಾಂಸದೊಂದು ಬಗೆಯ ಪರಿಪೂರ್ಣ ಸ್ಥಿತಿಯನ್ನು ಪ್ರತಿನಿಧಿಸುತ್ತಿದ್ದ ಸಿನಿಮಾ ಕಾಲವೊಂದಿತ್ತು. ಗಾರ್ಬೋಳ ಮುಖ ಇನ್ನೂ ಅಂಥ ಕಾಲಕ್ಕೇ ಸೇರಿರುವಂಥದ್ದು. ಅವಳದು ಯಾರೂ ಮುಟ್ಟಲಾಗದ, ಮುಟ್ಟದೇ ಇರಲೂ ಆಗದ ಮುಖ.

ಆಕೆ ಅಭಿನಯಿಸಿದ ಚಿತ್ರಗಳಲ್ಲಿ ಅವಳ ಮುಖ ಆಸಕ್ತಿ ಹುಟ್ಟಿಸುವ ಪ್ರಮುಖ ವಸ್ತುವಷ್ಟೇ ಆಗಿರಲಿಲ್ಲ, ಅದರಿಂದ ಹೊಮ್ಮುವ ಅರ್ಥದ ಪ್ರಮುಖ ವಾಹಕವೂ ಆಗಿತ್ತು. ಅವಳದು ನಿಜಕ್ಕೂ ಶ್ಲಾಘನೀಯವಾದ ಮುಖ–ವಸ್ತು. 'ಕ್ವೀನ್ ಕ್ರಿಸ್ತೀನಾ' ಸಿನಿಮಾದಲ್ಲಿ ಆಕೆಯ ಮೇಕಪ್ಪಿಗೆ ಮಂದವಾಗಿರುವ ಹಿಮದಂತಹ ಮುಖವಾಡವೊಂದರ ಸ್ವರೂಪವಿದೆ. ಅದು ಬಣ್ಣಬಳಿದ ಮುಖವಲ್ಲ; ಬಣ್ಣದ ಲೇಪನದಿಂದ ರಕ್ಷಿಸಿ, ಪ್ಲಾಸ್ಟರಿನಲ್ಲಿ ಕೂರಿಸಿದಂತಹ ಮುಖ. ತೀರ ನಯವೂ ನಿಬಿಡವೂ ಆದ ಹಿಮದ ನಡುವೆ ಮೃದುವಾದ ಮಾಂಸದಂತಿರುವ, ಅಂಥ ಅಭಿವ್ಯಕ್ತಿಯನ್ನೇನೂ ವ್ಯಕ್ತಪಡಿಸದ ಕಣ್ಣುಗಳು ಮಾತ್ರ ತುಸುವೇ ಕಂಪಿಸುವ ಎರಡು ಗಾಯಗಳಂತಿವೆ. ಎಣೆಯಿಲ್ಲದ ಸೌಂದರ್ಯವಿದ್ದರೂ ಆ ಮುಖ, ಕಲಾವಿದನೊಬ್ಬ ಬರೆದ ಚಿತ್ರದಂತಿರದೆ, ತೀರ ನಯವಾದ, ಮುಟ್ಟಿದರೆ ಪುಡಿಪುಡಿಯಾಗುವ ಯಾವುದೋ ದ್ರವ್ಯದಲ್ಲಿ ಕೊರೆದಿಟ್ಟಂತಿದೆ. ಅದು ಎಷ್ಟು ಪರಿಪೂರ್ಣವೋ ಅಷ್ಟೇ ಕ್ಷಣಭಂಗುರವೂ ಹೌದು.

ಗಾರ್ಬೋಗೆ ಯಾವುದೇ ಸೋಗಿಲ್ಲ; ಅವಳು ಸದಾ ತಾನೇ ಆಗಿರುವವಳು; ಕೀರೀಟದಡಿ ಅಥವಾ ಅಗಲ ಅಂಚಿನ ಹ್ಯಾಟಿನಡಿ ಅದೇ ಹಿಮದಂತಹ ಏಕಾಂತದ ಮುಖವನ್ನು ಬಿಂಬಿಸುವವಳು. ಅವಳದು 'ದಿವ್ಯ'ವದನ ಎನ್ನಲಾಗಿದೆ. ಹಾಗೆ ಹೇಳುವುದಕ್ಕೆ ಅವಳ ಸೌಂದರ್ಯದ ಅತ್ಯದ್ಭುತ ಸ್ಥಿತಿಯಷ್ಟೇ ಕಾರಣವಾಗಿರಲಾರದು. ಆಕೆಯ ಮುಖಕ್ಕೆ ಅದರ ಪರಿಪೂರ್ಣತೆಯನ್ನು ಬಿಟ್ಟು ಬೇರೆ ಯಾವ ವಾಸ್ತವವೂ ಬೇಕಾಗಲಿಲ್ಲ. ಅದೇ ಆ ಮುಖದ ಸತ್ವ. ಆ ಸತ್ವ ಕ್ರಮೇಣ ಕಪ್ಪುಕನ್ನಡಕಗಳಲ್ಲಿ, ಅಗಲ ಅಂಚಿನ ಹ್ಯಾಟುಗಳಲ್ಲಿ ಮರೆಯಾದರೂ, ಅದೆಂದೂ ಅಧೋಗತಿಗಿಳಿಯಲಿಲ್ಲ.

ದಿವ್ಯವೆನಿಸಿದ ಆ ಮುಖದಲ್ಲಿ ಮುಖವಾಡಕ್ಕಿಂತ ಹೆಚ್ಚು ಹರಿತವಾದ ಯಾವುದೋ ನಿಜತತ್ವವುಂಟು. ಅದು ಮೂಗಿನ ಹೊಳ್ಳೆಗಳ ಬಳುಕಿಗೂ ಹುಬ್ಬಿನ ಡೊಂಕಿಗೂ ನಡುವೆ ಇರುವ ಸುಸಂಗತ ಸಂಬಂಧಕ್ಕೆ ಸಂಬಂಧಪಟ್ಟದ್ದು. ಮುಖವಾಡವೆನ್ನುವುದು ಗೆರೆಗಳ ಒಂದು ಮೊತ್ತ; ಅದೇ ಒಂದು ಮುಖವೆಂದರೆ, ವಸ್ತುವಿಶೇಷದ ಸಾಮರಸ್ಯ. ಸಿನಿಮಾ ಸಾರಭೂತವಾದ ಸೌಂದರ್ಯದಿಂದ ಅಸ್ತಿತ್ವವಾದೀ ಸೌಂದರ್ಯವನ್ನು ಚಿತ್ರಿಸಲು ಪ್ರಯತ್ನಿಸಿದಾಗಲೆಲ್ಲ ಒಂದು ಬಗೆಯ ಭಾವಗೀತಾತ್ಮಕತೆಯ ಸಾಕಾರವಾಗಿರುವ ಗಾರ್ಬೋಳ ಮುಖ ಆ ಸಾಮರಸ್ಯದ, ತುಂಬ ನಾಜೂಕಾದ ಕ್ಷಣವನ್ನು ಪ್ರತಿನಿಧಿಸಿದ್ದುಂಟು.

ಒಂದು ಸ್ಥಿತ್ಯಂತರವೆಂದು ನೋಡಿದಾಗ ಗಾರ್ಬೋಳ ಮುಖ ಎರಡು ಮೂರ್ತಶಿಲ್ಪಸದೃಶ ಯುಗಗಳನ್ನು ಒಂದುಗೂಡಿಸುತ್ತದೆ. (ಹಾಲಿವುಡ್‌ನ ಇನ್ನೊಬ್ಬ ತಾರೆ) ಆಡ್ರೆ ಹೆಪ್‌ಬರ್ನಳ ಮುಖ ವ್ಯಕ್ತಿವಿಶೇಷದಿಂದ ಕೂಡಿದ್ದು. ಅದಕ್ಕೆ ಅವಳು (ಮಗುವಿನಂಥ ಹೆಣ್ಣಾಗಿಯೋ ಮುದ್ದಿನ ಬೆಕ್ಕಿನಮರಿಯಂಥ ಹೆಣ್ಣಾಗಿಯೋ) ಅಭಿನಯಿಸಿದ ಪಾತ್ರವಿಶೇಷವಷ್ಟೇ ಕಾರಣವಲ್ಲ; ಯಾವುದೇ ಅನನ್ಯ ಸತ್ವವನ್ನು ಉಳಿಸಿಕೊಳ್ಳದ ಅವಳ ವ್ಯಕ್ತಿತ್ವವೂ ಒಂದು ಕಾರಣ. ಒಂದು ಭಾಷೆಯಾಗಿ, ಗಾರ್ಬೋಳ ಅಪೂರ್ವತೆಯೇ ಒಂದು ವ್ಯವಸ್ಥಿತ ಪರಿಕಲ್ಪನೆ; ಆಡ್ರೆ ಹೆಪ್‌ಬರ್ನಳದು ವ್ಯವಸ್ಥಿತ ವಸ್ತುವಿಶೇಷ. ಗಾರ್ಬೋಳ ಮುಖ ಒಂದು ಐಡಿಯಾ; ಹೆಪ್‌ಬರ್ನಳದು ಒಂದು ಈವೆಂಟ್.

***

ಗ್ರೇಟಾ ಗಾರ್ಬೊ ಸಿನಿಮಾದಲ್ಲಿ ತನ್ನ ಹಾಜರಿಯಷ್ಟರಿಂದಲೇ ಅದೆಷ್ಟು ಪ್ರೇಕ್ಷಕರಿಗೆ ಹುಚ್ಚುಹಿಡಿಸಿದಳೆಂದರೆ, ಅವಳ ಬಗ್ಗೆ ಅನೇಕಾನೇಕ ದಂತಕತೆಗಳು ಹುಟ್ಟಿಕೊಂಡವು. ಕೆಲವರು



'ಕ್ವೀನ್ ಕ್ರಿಸ್ಟಿಯಾನಾ' ಚಿತ್ರದಲ್ಲಿ ಗ್ರೇಟಾ